**2 ನೇ ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ**
**ಮಾಗಡಿ**
**ಕ್ರಿಮಿನಲ್ ಪ್ರಕರಣ ಸಂಖ್ಯೆ - 3032/2021**
**ಚಾಸಾ - 01 / ಪ್ರಾಸಾ - 01**

| | |
|---|---|
| ಹೆಸರು | **ಚಲುವರಾಜು** |
| ತಂದೆಯ ಹೆಸರು | **ಗಿರಿಯಪ್ಪ** |
| ವಯಸ್ಸು | **45** |
| ಉದ್ಯೋಗ | **ವ್ಯವಸಾಯ** |
| ವಿಳಾಸ | **ಮೇಟಿ ಪಾಳ್ಯ** |

**ದಿನಾಂಕಃ 21-02-2025 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ:- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ-**

ಚಾಸಾ-2 ಮತ್ತು 3 ರವರು ನನ್ನ ತಂದೆ ತಾಯಿ. ಆರೋಪಿಗಳು ನಮ್ಮ ಮನೆಯ ಪಕ್ಕದವರು. 2015 ನೇ ಇಸವಿಯಲ್ಲಿ ನನ್ನ ಅಣ್ಣನವರು ಚಾಸಾ-2 ಮತ್ತು 3 ರವರನ್ನು ನೋಡಲು ಬೆಂಗಳೂರಿನಿಂದ ಬಂದಿದ್ದರು. ತೋಟದ ಮನೆಯ ಹತ್ತಿರ ಕಾರನ್ನು ಸಲ್ಲಿಸಿದರು ಮತ್ತು ಮಾರನೇ ದಿನ ಬೆಳಗ್ಗೆ ವಾಪಸ್ಸು ಹೊರಡುವ ಸಮಯದಲ್ಲಿ ಕಾರನ್ನು ಯಾಕೆ ನಿಲ್ಲಿಸಿದ್ದೀರಾ ಎಂದು ಗಲಾಟೆಯನ್ನು ಮಾಡಿದರು. ನನ್ನ ಅಣ್ಣ ಮತ್ತು ಅತ್ತಿಗೆ ಕೆಲಸಕ್ಕೆ ಹೋಗುವ ಸಲುವಾಗಿ ಹೊರಟು ಹೋದರು. ನಂತರ ಸಂಜೆ ಸಮಯದಲ್ಲಿ ಚಾಸಾ-2 ಮತ್ತು 3 ರವರ ಜೊತೆ ಜಗಳವನ್ನು ಮಾಡಿದರು. ಸದರಿ ವಿಷಯವನ್ನು ನನಗೆ ರಾತ್ರಿ ತಿಳಿಸಿದ್ದರು, ಆಗಾಗಿ ನಾನು ಮಾರನೇ ದಿನ ದೂರನ್ನು ನೀಡಲು ಹೋಗಿದ್ದೇನು. ನಾನು ದೂರನ್ನು ನೀಡಿ ವಾಪಸ್ಸು ಬಂದಾಗ ಆರೋಪಿಗಳು ನನ್ನ ಜೂತೆಯಲ್ಲಿ ಗಲಾಟೆಯನ್ನು ಮಾಡಿದರು.

ಈಗ ಸಾಕ್ಷಿಗೆ ದೂರಿನ ನಕಲು ಪ್ರತಿಯನ್ನು ತೋರಿಸಿದ್ದು, ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ಗುರುತಿಸಿರುತ್ತಾರೆ. ಸದರಿ ದೂರು ನಕಲು ಪ್ರತಿ

ಆಗಿರುವ ಕಾರಣದಿಂದ ನಿಶಾನೆಯಾಗಿ ಗುರುತಿಸಿರುವುದಿಲ್ಲ.

ಆರೋಪಿಗಳು ನಾನು ದೂರನ್ನು ನೀಡಿ ಬಂದ ನಂತರ ನನ್ನ ಮೇಲೆ ಹಲ್ಲೆಯನ್ನು ಮಾಡಿ ಅವಾಚ್ಯ ಶಬ್ದಗಳಿಂದ ಬೈದರು. ಪೋಲೀಸರು ಸ್ಥಳಕ್ಕೆ ಬಂದು ಆರೋಪಿಗಳು ಮತ್ತು ನನ್ನನ್ನು ಠಾಣೆಗೆ ಕರೆದುಕೊಂಡು ಹೋದರು. ಪುನಃ ವಾಪಸ್ಸು ಬರುವ ಸಮಯದಲ್ಲಿ 1 ನೇ ಆರೋಪಿಯು ನನ್ನ ಜೊತೆಯಲ್ಲಿ ಗಾಲಾಟೆಯನ್ನು ಮಾಡಿದರು. ಪೋಲೀಸರು ನನ್ನ ದೂರನ್ನು ಸ್ವೀಕರಿಸದೇ ಇದ್ದ ಕಾರಣ ನಾನು ನ್ಯಾಯಾಲಯಕ್ಕೆ ಪಿ. ಸಿ. ಆರ್ ನ್ನು ಸಲ್ಲಿಸಿರುತ್ತೇನೆ. ಈಗ ಸಾಕ್ಷಿಗೆ ಖಾಸಗಿ ದೂರನ್ನು ತೋರಿಸಿದ್ದು, ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ಗುರುತಿಸಿರುತ್ತಾರೆ. ಖಾಸಗಿ ದೂರನ್ನು ನಿಪಿ-1 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

2021 ನೇ ಇಸವಿಯಲ್ಲಿ ಪೋಲೀಸರು ಸ್ಥಳಕ್ಕೆ ಬಂದು ಪಂಚನಾಮೆಯನ್ನು ಮಾಡಿರುತ್ತಾರೆ. ಈಗ ಸಾಕ್ಷಿಗೆ ಪಂಚನಾಮೆಯನ್ನು ತೋರಿಸಿದ್ದು, ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ಗುರುತಿಸಿರುತ್ತಾರೆ. ಪಂಚನಾಮೆಯನ್ನು ನಿಪಿ-2 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ನಿಪಿ-2 ಕ್ಕೆ ನನ್ನ ಜೊತೆ ಚಾಸಾ-2 ರಿಂದ 5 ರವರು ಸಹಿಯನ್ನು ಮಾಡಿರುತ್ತಾರೆ. ಸದರಿ ವಿಷಯಕ್ಕೆ ಸಂಬಂಧಿಸಿದಂತೆ ನಾನು ನನ್ನ ಹೇಳಿಕೆಯನ್ನು ನೀಡಿರುತ್ತಾರೆ. ನಾನು ಆರೋಪಿಗಳನ್ನು ನೋಡಿದರೆ ಗುರುತಿಸುತ್ತೇನೆ. ಇಂದು ನ್ಯಾಯಾಲಯದ ಮುಂದೆ ಆರೋಪಿಗಳು ಹಾಜರಿರುವುದಿಲ್ಲ. ಆರೋಪಿಗಳನ್ನು ಗುರುತಿಸುವಲ್ಲಿ ಆರೋಪಿಗಳ ಪರ ವಕೀಲರಿಂದ ಯಾವುದೇ ತಕರಾರು ಇರುವುದಿಲ್ಲ.

**ಈ ಹಂತದಲ್ಲಿ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರ ಮಖವಿಯನ್ನು ಪುರಸ್ಕರಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

**ಪಾಟೀ ಸವಾಲು:- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ:-**

ದಿ.27-09-2015 ರಂದು ಸಂಜೆ 5 ಗಂಟೆ ಸಮಯದಲ್ಲಿ ನಿಮ್ಮ ಅಣ್ಣನಾದ ನಾಗರಾಜುರವರು ಚಾಸಾ-2 ಮತ್ತು 3 ರವರನ್ನು ನೋಡಲು ನಿಮ್ಮ ಮನೆಗೆ ಬಂದಿದ್ದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಅವರು ಬಂದಿದ್ದ ಕಾರನ್ನು ಚಾಸಾ-2 ಮತ್ತು 3 ರವರು ವಾಸಿಸುತ್ತಿರುವ ಮನೆಯ ಹಿಂಭಾಗದಲ್ಲಿ ಇರುವ ನಿಮ್ಮ ಜಾಗದಲ್ಲಿ ನಿಲ್ಲಿಸಿದ್ದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ದಿ.28-09-2015 ರಂದು ಬೆಳಗ್ಗೆ 10.30 ರ ಸಮಯದಲ್ಲಿ ಕಾರು ನಿಲ್ಲಿಸುವ ವಿಷಯಕ್ಕೆ ಸಂಬಂಧಿಸಿದಂತೆ 1 ನೇ ಆರೋಪಿಯು ಗಲಾಟೆಯನ್ನು ಮಾಡಿದ್ದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ರಾತ್ರಿ 8.30 ರ ಸವುಯದಲ್ಲಿ ನೀವು ಕೆಲಸವನ್ನು ಮುಗಿಸಿಕೊಂಡು ಮನೆಗೆ ವಾಪಸ್ಸು ಬಂದು ಚಾಸಾ-2 ಮತ್ತು 3 ರವರಿಗೆ ಪೋನ್ ಮಾಡಿದಾಗ ಅವರು ಸಂಜೆ 7 ಗಂಟೆ ಸಮಯದಲ್ಲಿ ಮನೆಯ ಮುಂದೆ ನಿಂತಿದ್ದಾಗ ಆರೋಪಿಗಳು ಅವರ ಮನೆಯ ಬಳಿ ಬಂದ್ದಿರು ಮತ್ತು 2 ನೇ ಆರೋಪಿಯು ನಿಮ್ಮ ಮಕ್ಕಳು ಏಕೆ ಕಾರನ್ನು ನಿಲ್ಲಿಸಬೇಕು ಎಂದು ಅವಾಚ್ಯ ಶಬ್ದಗಳಿಂದ ಬೈದು, ಕೈಯಿಂದ ಹೊಡೆದು ಇನ್ನೊಂದು ಸಾರಿ ಅವರ ತಂಟೆಗೆ ಹೋದರೆ ಪ್ರಾಣ ತೆಗೆಯುತ್ತೇನೆ ಎಂದು ಬೆದರಿಕೆ ಹಾಕಿದರು ಎಂದು ತಿಳಿಸಿದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ.

ದಿ.29-09-2015 ರಂದು ನೀವು ಠಾಣೆಗೆ ಬಂದಿದ್ದು, ನಂತರ ನಿಮ್ಮ ಜಾಗದ ದಾಖಲೆಗಳನ್ನು ತೆಗೆದುಕೊಂಡು ಬರಲು ಮನೆಯ ಬಳಿ ಹೋದಾಗ ಆರೋಪಿಗಳು ನಿಮ್ಮನ್ನು ಅಡ್ಡಗಟ್ಟಿದ್ದರು ಮತ್ತು 1 ನೇಆರೋಪಿಯು ತನ್ನ ಕೈಯಿಂದ ನಿಮ್ಮ ಎಡಗೈಗೆ ಹೊಡೆದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನಂತರ ನೀವು ಠಾಣೆ ಬಳಿ ಇದ್ದ ನಿಮ್ಮ ಪರಿಚಯಸ್ತರಿಗೆ ಪೋನ್ ಅನ್ನು ಮಾಡಿದ್ದು ಮತ್ತು ಅವರ ಜೊತೆಯಲ್ಲಿ ನೀವು ಠಾಣೆಗೆ ಹೋಗಿರುತ್ತೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ.

ನಿಪಿ-1 ರ ಆಧಾರದ ಮೇಲೆ ದಿ.02-02-2021 ರಂದು ಪಂಚನಾಮೆಗೆ ಸಹಕರಿಸುವಂತೆ ಹೇಳಿ ಪೋಲೀಸರು ನಿಮಗೆ, ಚಾಸಾ-4 ಮತ್ತು 5 ರವರಿಗೆ ನೋಟಿಸ್ ನ್ನು ನೀಡಿದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಈಗ ಸಾಕ್ಷಿಗೆ ನೋಟಿಸ್ ನ್ನು ತೋರಿಸಿದ್ದು, ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ಗುರುತಿಸಿರುತ್ತಾರೆ. ನೋಟಿಸ್ ನ್ನು ನಿಪಿ-3 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ಅದೇ ದಿನದಂದು ಸಂಜೆ 4 ರಿಂದ 5.00 ಗಂಟೆ ಸಮಯದಲ್ಲಿ ನೀವು ತೋರಿಸಿದ ಜಾಗದಲ್ಲಿ ಪೋಲೀಸರು ನಿಪಿ-2 ರಂತೆ ಪಂಚನಾಮೆಯನ್ನು ಮಾಡಿ ನಿಮ್ಮ, ಚಾಸಾ-4 ಮತ್ತು 5 ರವರ ಸಹಿಯನ್ನು ಪಡೆದುಕೊಂಡರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ದಿ.02-02-2021 ರಂದು ನೀವು ನಿಮ್ಮ ಹೇಳಿಕೆಯನ್ನು ಪೋಲೀಸರಿಗೆ ನೀಡಿರುತ್ತೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ.

**ಪಾಟೀ ಸವಾಲುಃ- ಆರೋಪಿಗಳ ಪರ ಶ್ರೀ. ಜಿ. ಎನ್, ವಕೀಲರಿಂದಃ-**

1. ದಿ.28-09-2015 ರಂದು ಬೆಳಗ್ಗೆ 10 ರಿಂದ 10.45 ರ ಸಮಯದಲ್ಲಿ ಕೃತ್ಯವು ನಡೆದಿರುತ್ತದೆ. ಗಲಾಟೆ ನಡೆದ ದಿನದಂದೇ ನಾನು ದೂರನ್ನು ನೀಡಿರುತ್ತೇನೆ. ಯಾವುದೇ ಘಟನೆಯು ನಡೆದಿಲ್ಲ ಎಂದು ಹೇಳಿ ಪೋಲೀಸರು ಹಿಂಬರಹವನ್ನು ನೀಡಿದರು ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ಕೃತ್ಯ ನಡೆದ ಸ್ಥಳಕ್ಕೆ ಸಂಬಂಧಿಸಿದ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ನೀವು ಯಾವುದೇ ರೆವಿನ್ಯೂ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿಯು ನೆನಪಿಲ್ಲ ಎನ್ನುತ್ತಾರೆ. ನಿಮ್ಮ ಮತ್ತು ಅರೋಪಿಗಳ ನಡುವೆ ಸರ್ವೆ ನಂ.18 ಕ್ಕೆ ಸಂಬಂಧಿಸಿದಂತೆ ಓ. ಎಸ್ ಸಂ. 124/2007 ರಂತೆ ಮಾಗಡಿ ನ್ಯಾಯಾಲಯದಲ್ಲಿ ದಾವೆ ಇತ್ತು ಮತ್ತು ಸದರಿ ದಾವೆಯು ಆರೋಪಿಯ ಪರವಾಗಿ ಡಿಕ್ರಿಯಾಗಿರುತ್ತದೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಆರೋಪಿಗಳು ನಿಮ್ಮ ವಿರುದ್ದ ದಾವೆಯನ್ನು ಸಲ್ಲಿಸಿದರು

ಎಂಬ ವಿಷಯವನ್ನು ಮನಸ್ಸಿನಲ್ಲಿ ಇಟ್ಟುಕೊಂಡು ಅವರಿಗೆ ತೊಂದರೆಯನ್ನು ಕೊಡಬೇಕು ಎಂಬ ಉದ್ದೇಶದಿಂದ ನ್ಯಾಯಾಲಯಕ್ಕೆ ಸುಳ್ಳಾಗಿ ಖಾಸಗಿ ದೂರನ್ನು ಸಲ್ಲಿಸಿರುತ್ತೀರಾ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ.

2. ನಾನು ಯಾವ ದಿನಾಂಕದಂದು ದೂರನ್ನು ನೀಡಿದ್ದೇನೆ ಎಂದು ನನಗೆ ನೆನಪಿಲ್ಲ. ನೀವು ನಿಪಿ-2 ಮತ್ತು 3 ಕ್ಕೆ ಠಾಣೆಯಲ್ಲಿ ಸಹಿಯನ್ನು ಮಾಡಿರುತ್ತೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನಿಪಿ-2 ಮತ್ತು 3 ಕ್ಕೆ ನಿಮ್ಮ ಜೊತೆಯಲ್ಲಿ ಚಾಸಾ-4 ಮತ್ತು 5 ರವರು ಠಾಣೆಯಲ್ಲಿ ಸಹಿಯನ್ನು ಮಾಡಿರುತ್ತಾರೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ.

**ಮರು ವಿಚಾರಣೆ :- ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,**

**2 ನೇ ಅ. ನ್ಯಾ. ದಂ. ಮತ್ತು ಜೆಎಂಎಫ್‌ಸಿ, ಮಾಗಡಿ.**